# ಬೆಳಕಿನ ನೆರಳು

## ಮಹಾತ್ಮ ಮತ್ತು ಹರಿಲಾಲ್

■ ಮೂಲ: **ದಿನಕರ್ ಜೋಶಿ**
■ ಕನ್ನಡಕ್ಕೆ: **ಡಿ.ಎನ್. ಶ್ರೀನಾಥ್**
ಕಲೆ: ಮನೋಹರ ಆಚಾರ್ಯ



## ರಾಮಿ ಮದುವೆ

ಬಾ ಅವರು ತಮ್ಮ ಸೀರೆಯ ಸೆರಗಿನಿಂದ ತಮ್ಮ ಮುಖವನ್ನು ಮುಚ್ಚಿಕೊಂಡರು. ತಮ್ಮ ಕಣ್ಣುಗಳನ್ನು ಬೆರಳುಗಳಿಂದ ಒರೆಸಿಕೊಂಡರು. ಆದರೆ ಬಾಪೂ ಅವರ ಗಮನ ನೂಲು ತೆಗೆಯುವ ಕೆಲಸದಲ್ಲಿ ಮಾತ್ರ ಕೇಂದ್ರೀಕೃತವಾಗಿತ್ತು. ಬಾ ಅವರು ಎದ್ದು ಹೊರಗೆ ಹೋದರು. ಈಗ ಬಾಪೂ ಚರಕವನ್ನು ನಿಲ್ಲಿಸಿ ಮಹಾದೇವರನ್ನು ನೋಡುತ್ತಾ ಹೇಳಿದರು, 'ಮಹಾದೇವ, ಹರಿಲಾಲ ಕಂಪನಿಯ ಶೇರುಗಳನ್ನು ಬಿಡುಗಡೆ ಮಾಡಿದ್ದಾನೆ, ಬೇರೆಯವರು ಸಹ ಇದರಲ್ಲಿ ಸಿಲುಕಿರಬಹುದು. ಅವನು ನನ್ನ ಮಗನಾದ ಲಾಭವನ್ನು ಹಾಗೂ ನನ್ನ ರಕ್ತ ಸಂಬಂಧದ ಲಾಭವನ್ನು ಖಂಡಿತ ಪಡೆದಿರಬಹುದು. ನಿರ್ದೋಷಿಗಳು ಭ್ರಮೆಗೊಳಗಾಗಿ ನಷ್ಟವನ್ನು ಅನುಭವಿಸಬಾರದೆಂದು ನಾನು ಸಾರ್ವಜನಿಕವಾಗಿ ಒಂದು ಸ್ಪಷ್ಟೀಕರಣವನ್ನು ಕೊಡಲು ಬಯಸುತ್ತೇನೆ...'

'ಬಾಪೂ...' ಮಹಾದೇವರು ತಮ್ಮ ಮೊಣಕಾಲಿನ ಮೇಲೆ ಮರದ ಹಲಗೆಯನ್ನಿಟ್ಟು ಹಾಳೆಯನ್ನು ಹಿಡಿದುಕೊಂಡರು.

'ಹೌದು, ಮಹಾದೇವ!' ಬಾಪೂ ತುಂಬಾ ದುಃಖಿತರಾಗಿ ಹೇಳಿದರು, ನವಜೀವನದ ಮುಂದಿನ ಸಂಚಿಕೆಯಲ್ಲಿ ನನ್ನ ಹೆಸರಿನಲ್ಲಿ ಒಂದು ಸಾರ್ವಜನಿಕ ಸ್ಪಷ್ಟೀಕರಣವನ್ನು ಕೊಡುತ್ತಾ ಒಂದು ಲೇಖನವನ್ನು ಈ ರೀತಿಯಲ್ಲಿ ಪ್ರಕಟಿಸಿ..

'ಹರಿಲಾಲ ನನ್ನ ಮಗನೆಂಬುದು ನಿಜ, ಆದರೆ ಸಾಕಷ್ಟು ಸಮಯದಿಂದ ನಾವು ಬೇರೆಯಾಗಿದ್ದೇವೆ. ನಾನು ಹರಿಲಾಲನ ಯಾವುದೇ ಕೆಲಸಗಳಲ್ಲಿ ಭಾಗಿಯಾಗಿಲ್ಲ. ಹೀಗಾಗಿ ಈ ರಕ್ತ ಸಂಬಂಧದ ಲಾಭ ಅವನಿಗೆ ಸಿಗಬಾರದು...ಯಾರು ಭ್ರಮೆಗೊಳಗಾಗಿದ್ದಾರೋ, ಅವರ ಬಗ್ಗೆ ವಿಷಾದವನ್ನು ವ್ಯಕ್ತಪಡಿಸುವುದನ್ನು ಹೊರತುಪಡಿಸಿ ಈಗ ನಾನೇನೂ ಸಹ ಮಾಡಲಾರೆ. ಒಂದು ವೇಳೆ ಹರಿಲಾಲನಲ್ಲಿ ಮನುಷ್ಯತ್ವ ಉಳಿದಿದ್ದರೆ ಅವನು ಎಲ್ಲರ ಹಣವನ್ನು ಹಾಲಿನಿಂದ ತೊಳೆದು ಹಿಂತಿರುಗಿಸಲಿ. ಇದೇ ನಿಜವಾದ ಧರ್ಮ... ಪಾರಿವಾರಿಕ ಸಂಬಂಧಗಳಲ್ಲಿ ಸ್ವಂತ ತಂದೆಯ ರಕ್ಷಣೆಗೂ ಒಂದು ಮಿತಿ ಇರುತ್ತದೆ. ದೇವರ ರಕ್ಷಣೆಗೆ ಮಿತಿ ಇಲ್ಲ. ಹರಿಲಾಲನನ್ನು ದೇವರೇ ರಕ್ಷಿಸಬಲ್ಲ. ಕೊನೆಯದಾಗಿ, ಯಾರಿಗೆ ನಷ್ಟವಾಗಿದೆಯೋ ಅವರು ಭವಿಷ್ಯದಲ್ಲಿ ಎಚ್ಚರಿಕೆಯಿಂದ ಇರಬೇಕು...'

ಬಾಪೂ ಅವರ ಹೇಳಿಕೆಯನ್ನು ಮಹಾದೇವರು ಬರೆದುಕೊಳ್ಳುತ್ತಿದ್ದರು, ಬಾಪೂ ಹೇಳಿ ಬರೆಯಿಸುತ್ತಿದ್ದರು. ಲೇಖನ ಪೂರ್ಣವಾದ ನಂತರ ಬಾಪೂ ತಮ್ಮ ಕಣ್ಣುಗಳನ್ನು ತೆರೆದರು. ಮಹಾದೇವ ದೇಸಾಯಿಯವರಿಗೆ ಒಂದು ಕ್ಷಣ ಭ್ರಮೆಯಾಯಿತು ಬಾಪೂ ಅವರ ಕಣ್ಣುಗಳೂ ಸಹ ತೇವವಾಗಿದ್ದವು.

ಬಾ ಅವರು ಬಾಪೂ ಅವರ ಕೋಣೆಯಿಂದ ಹೊರ ಬಂದು ಕೈಸಾಲೆಯ ಬಳಿಯಿದ್ದ ಕೋಣೆಗೆ ಬಂದಾಗ ಅಲ್ಲಿ ದೇವದಾಸ ನಿಂತಿದ್ದ. ಬಾಪೂ ತಮ್ಮೊಂದಿಗೆ ನಡೆಸಿದ ಮಾತುಕತೆಯನ್ನು ಬಹುಶಃ ದೇವದಾಸ ಕೇಳಿರಬಹುದೆಂದು ಬಾ ಅವರಿಗೆ ಅನ್ನಿಸಿತು. ದೇವದಾಸ ಬಾ ಅವರ ಸಮೀಪದಲ್ಲಿಯೇ ನಿಂತಿದ್ದ. ಅವನು ಮಾತನಾಡಲಿಲ್ಲ. ಬಾ ಮಗನ ಬೆನ್ನನ್ನು